ಮಡಿಕೊಂಡ ಗುರುಪಾದ ಅವೆಲ್ಲಾ ಸುಲಭದ ಸಂಗತಿಯೇ; ಇನ್ನೆರಡು ದಿನದಲ್ಲಿ ಸರಿಮಾಡಿ ಉತ್ತಮ ಗುಣಮಟ್ಟದ ಕೆಲಸವನ್ನೇ ಡೆಲಿವರಿಮಾಡಬಹುದು ಎನ್ನುತ್ತಿದ್ದಂತೆ ಅವಳು ಹೊರನಡೆದಿದ್ದಳು. ಗುರುಪಾದನೇನು 'ಅವಳ ತಪ್ಪು' ಎಂದು ಎಲ್ಲರಮುಂದೆ ಹೇಳಿರಲಿಲ್ಲ. ಮತ್ತು ಅವಳ ತಪ್ಪನ್ನು ಉಳಿದ ಡಿಪಾರ್ಟ್‌ಮೆಂಟಿನವರಿಗೆ ತಿಳಿಯದಂತೆ ಸಂಭಾಳಿಸಿದ್ದ. ಇನ್ನುಳಿದ ಎರಡು ದಿನದಲ್ಲಿ ಏನೇನು ಮಾಡಬೇಕೆಂಬ ಕೆಲವು ಮುಖ್ಯ ನಿರ್ಧಾರದೊಂದಿಗೆ ಎಲ್ಲರ ಸೇರುವಿಕೆ ಮುಗಿದಿತ್ತು.

ಗುರುಪಾದ ಮೀಟಿಂಗ್ ಮುಗಿಸಿ ತನ್ನ ಕಂಪ್ಯೂಟರ್ ಲಾಗಿನ್ ಆಗುತ್ತಿದ್ದಂತೇ ಸೀಯೊನಳ ಒಂದು ದೊಡ್ಡ ಸಂದೇಶ ಪಾಪ್ ಆಯಿತು. 'ನಿಮ್ಮ ಪ್ರೀತಿ ಸಹಕಾರ ಮತ್ತು ಈ ಒಂದು ವರುಷ ಕಲಿಸಿದ್ದಕ್ಕೆ ನಾನು ಯಾವತ್ತೂ ಆಭಾರಿ. ನಿಮ್ಮ ನಿರೀಕ್ಷೆಗೆ ಇಂದು ನಾನು ಕೆಲಸ ಕೊಡಲಾಗದೇ ಇರಬಹುದು. ಆದರೆ, ನನಗೆ ಇನ್ನು ಎರಡು ದಿವಸ ಇದೆ. ಅದರೊಳಗೆ ನಿಮ್ಮ ನಿರೀಕ್ಷೆಗೆ ತಕ್ಕಂತೆ ನನ್ನ ಕೆಲಸ ಡೆಲಿವರಿಯಗುತ್ತದೆ. ಮತ್ತೆ ಇನ್ನೊಂದು ವಿಷಯ... ನಾನು ನಾಳೆ ಬೆಳಿಗ್ಗೆ ರಾಜೀನಾಮೆ ಸಲ್ಲಿಸುತ್ತಿದ್ದೇನೆ. ಕೆಲಸಕ್ಕೆ ಸಂಬಂಧ ಪಟ್ಟ ಯಾವುದೇ ಕಾರಣವಿಲ್ಲ. ಐ ವಾಂಟ್ ಟು ಪ್ರೊಡ್ಯುಸ್ ಮೈ ಸೆಕೆಂಡ್ ಚೈಲ್ಡ್... ಬೇಸರಿಸಬೇಡಿ. ಇದರ ಬಗ್ಗೆ ಹೆಚ್ಚಿನ ಚರ್ಚೆ ನಾನು ಇಷ್ಟಪಡುವುದಿಲ್ಲ. ನಾಳೆ ಹೋಗುವ ಮೊದಲು ನಾನು ನಿಮಗೆ ಸಿಗುತ್ತೇನೆ' ಎಂದಿತ್ತು. ಮೆಸೆಜ್ ಓದಿದೊಡನೆಯೇ ಗುರುಪಾದ ಎದ್ದು ನಿಂತ. ಅವಳು ಆಗಲೇ ಮನೆಗೆ ಹೊರಟಾಗಿತ್ತು.

ಬೀಸುವ ಗಾಳಿಯಿಂದ ಬುರುಡೆ ದೀಪ ನಂದೇ ಹೋಗುತ್ತಿರುವಾಗ ತನ್ನ ಕೈಗಳಿಂದ ಅದನ್ನು ನಂದಿ ಹೋಗದಂತೆ ತಡೆದು ಇನ್ನೇನು ಸ್ಥಿರವಾಯಿತೆನ್ನುವಾಗ ಕೈಯಿಂದಲೇ ದೀಪದ ನೆಣೆ ಹಿಸುಕಿದರೆ ಹೇಗೆ? ದೀಪ ನನ್ನದಲ್ಲವಲ್ಲಾ... ಎನ್ನುತ್ತಾ ಮತ್ತೆ ಕೆಲಸ ಮಾಡಲು ಮನಸ್ಸು ಬರದೆ ಗುರುಪಾದ ಮನೆಕಡೆಗೆ ಹೊರಟುಬಿಟ್ಟ.

ಗಾಬರಿಯ ನಿರ್ಧಾರ ಆಗದೇ ಇದ್ದರೆ ಸಾಕು. ಮನೆಯ ಮೇಲೆ ಸಾಲ ಇದ್ದರೆ ಹೇಗೆ ತೀರಿಸುತ್ತಾರೋ. ಒಂದು ಭಾನುವಾರ ಊಟಕ್ಕೆ ಹೋದಾಗ ತನ್ನ ತಾಯಿ ಚೈನಾದವಳು, ಅವಳು ಗಟ್ಟಿಗಿತ್ತಿ ಎಂದಿದ್ದಳಷ್ಟೇ ಹೊರತೂ ಇನ್ನೇನೂ ಹೇಳಿರಲಿಲ್ಲ ಆಕೆ. ಚೈನಾದಲ್ಲಿ ಎರಡನೇ ಮಗು ಹಡೆಯಲಾಗುವುದಿಲ್ಲಾ ಎಂದೇ ಅವಳು ಕೊರಿಯಾಕ್ಕೆ ಬಂದಿದ್ದಳೆ? ಸೀಯೊನಳೇ ಅವಳ ಎರಡನೇ ಮಗಳೆ? ಆ ಸಮಯದ ತಾಯಿಯ ಉತ್ಕಟತೆಯೇ ಈಗ ಮಗಳಲ್ಲಿ ಇನ್ನೊಂದು ರೂಪದಲ್ಲಿ ಹರಿಯುತ್ತಿದೆಯೆ? ಇವೆಲ್ಲಾ ಕಾರಣಕ್ಕಾಗೇ ಈ ಕರಿಯರ್‌ರಿಗೊಂದು ಬೆಂಕಿ... ನನ್ನದೇನಿದ್ದರೂ ನನ್ನ ಸಂಸಾರ ಹಾಗೂ ನನ್ನನ್ನೇ ಎದುರು ಕಾಣುತ್ತಿರುವ ನನ್ನ ಎರಡನೇ ಮಗು... ಎಂದುಕೊಂಡು ಮುನ್ನುಗ್ಗಲು ನಿರ್ಧರಿಸಿದ್ದಾಳೋ ಎನ್ನುವುದು ಗುರುಪಾದನಿಗೆ ಅರ್ಥವಾಗಲಿಲ್ಲ. ಅದಕ್ಕಾಗೇ ಹೆಚ್ಚಾಗಿ ಎರಡು ವಾರದ ಹಿಂದೆ ಆಫೀಸಿಗೆ ಬರುವ ಮುನ್ನ ಗ್ರುಪ್ ಚಾಟ್‌ನಲ್ಲಿ ಸಂಸಾರ, ಮೊದಲ ಮಗ ಪಿಯಾನೊ ಬಾರಿಸುತ್ತಿರುವ, ಕುದುರೆಯ ಮೇಲೆ ಹೋಗುತ್ತಿರುವ ಫೋಟೊ ಹಾಕುತ್ತಿದ್ದಳೇ... ಅದೂ ಅರ್ಥವಾಗಲಿಲ್ಲ.

ಮರುದಿನವೇ ಸೀಯೊನಳ ಕೊನೆಯ ದಿನವಾಗಿತ್ತು. ಲವಲವಿಕೆಯಿಂದಲೇ ಓಡಾಡಿಕೊಂಡು ಕೆಲಸ ಮಾಡುತ್ತಿದ್ದಳು. ಬೆಳಿಗ್ಗೆಯೇ ಗುರುಪಾದ ಅವಳ ಬಳಿ ಹೋಗಿ ಶುಭ ಹಾರೈಸಿ ಬಂದ. ಚಾಟಿನ ಮೂಲಕವೂ 'ನೀನು ಭವಿಷ್ಯದಲ್ಲಿ ತೆಗೆದುಕೊಳ್ಳುವ ಎಲ್ಲ ಕೆಲಸಕ್ಕೂ ಯಶಸ್ಸು ಸಿಗಲಿ' ಎಂದು ದೇವರ ಹೆಸರು ತೆಗೆಯಲು ಹೋಗಿ ಅಲ್ಲೆ ಮೊಟಕುಗೊಳಿಸಿ ಇವರದ್ದು ಯಾವ ದೇವರು... ಯಾವತ್ತೂ ದೇವರ ಹೆಸರೇ ತೆಗೆದುಕೊಳ್ಳದ... ಇಲ್ಲದವರಿಗೆ... ಏನು ಹೇಳುವುದು